KAVP500013322022

NAGESH
KORGA
MOGER

judgment
Digitally signed by NAGESH KORGA MOGER
Location: Sr.Civil Judge and JMFC Sindagi
Date: 2026.07.06 17:25:24 +0530

Presented on : 17-09-2022
Registered on : 17-09-2022
Decided on : 01-07-2026
Duration : 3 years, 9 months, 14 days

ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರ ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ , ಸಿಂದಗಿ

ಉಪಸ್ಥರು: ಶ್ರೀ ನಾಗೇಶ ಕೆ. ಮೊಗೇರ.,
ಬಿ.ಕಾಂ, ಎಲ್.ಎಲ್.ಎಮ್
ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ

**ಕ್ರಿಮಿನಲ್ ಪ್ರಕರಣ ಸಂಖ್ಯೆ 723/2022**
**ದಿನಾಂಕ 1 ನೇ ಜುಲೈ-2026.**

ಪಿರ್ಯಾದುದಾರರು:

ಸರ್ಕಾರದ ಪರವಾಗಿ ಸಿಂದಗಿ ಪಿ.ಎಸ್

( A.P.P)

ವಿರುದ್ಧ

ಆರೋಪಿತರು

1. ಅಜಯ ತಂ. ಅಣ್ಣಾಸಾಹೇಬ @ ಅಣ್ಣಾಸೋ ಮಹಾತ್ರೇ
ವಯಾಃ 29 ವರ್ಷ, ಉಃ ಮೆಕ್ಯಾನಿಕ್
ಸಾಃ ಶಿರೋಳ , ಜಿಃ ಸೋಲಾಪೂರ, ರಾಜ್ಯಃ ಮಹಾರಾಷ್ಟ್ರ.

2. ಸುಭಾಸ ತಂ.ವಸಂತ ಪಾಟೀಲ
(Pleaded guilty)

( A-1 by Sri.S.S.S Adv.)

<u>ತೀರ್ಪು</u>

ಆರಕ್ಷಕ ವೃತ್ತ ನಿರೀಕ್ಷಕರು, ಸಿಂದಗಿ ವೃತ್ತ ಇವರು ಆರೋಪಿ ನಂ.1 ರವರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 279, 337, 304 ಎ ರನ್ವಯ ಮತ್ತು ಆರೋಪಿ ನಂ.2 ರವರ ವಿರುದ್ಧ ಮೋಟಾರ ವಾಹನ ಕಾಯ್ದೆ ಕಲಂ 146 ಸ.ಕ. 196 ರನ್ವಯ ಶಿಕ್ಷಾರ್ಹವಾದ ಅಪರಾಧಗಳಿಗೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** <u>ಅಭಿಯೋಜನೆಯ ಪ್ರಕರಣದ ಸಂಕಿಪ್ತ ಸಾರಾಂಶ ಎನೆಂದರೆ</u>

ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯ ವಿಜಯಪುರ-ಕಲಬುರ್ಗಿ ಎನ್.ಎಚ್-50 ರಲ್ಲಿ ಯಂಕಂಚಿ ಬೈಪಾಸ ಹತ್ತಿರ ದಿನಾಂಕ 08.03.2022 ರಂದು 23.20 ಗಂಟೆಯ ಸುಮಾರಿಗೆ ಆರೋಪಿ ನಂ.1 ರವರು, ವಿಮಾ ಪಾಲಿಸಿ ಮಾಡಿಸದೇ ಇರುವ ಆರೋಪಿ ನಂ.2 ರವರ ಮಾಲೀಕತ್ವದ ಕಾರ ನಂ.ಎಮ್.ಎಚ್-12/ ಇ.ಜಿ-7990 ನೇದ್ದರಲ್ಲಿ ಚಾ.ಸಾ.4 ರವರ ಮಗನನ್ನು ಕೊಡಿಸಿಕೊಂಡು ಅತೀ ವೇಗವಾಗಿ ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿ, ಮುಂದೆ ಹೊರಟಿದ್ದ ಟ್ರ್ಯಾಕ್ಟರ ನಂ.ಕೆ.ಎ.28/ಟಿ.ಡಿ-9696 ನೇದ್ದಕ್ಕೆ ಜೋಡಿಸಿದ್ದ ಕಬ್ಬು ತುಂಬಿದ ಟ್ರೇಲರ ನಂ.ಕೆ.ಎ.28/ಟಿ.ಸಿ-3087, ಕೆ.ಎ.28/ಟಿ.ಸಿ-3088 ನೇದ್ದಕ್ಕೆ ಹಿಂಬದಿಯಿಂದ ಹಾಯಿಸಿ ಅಪಘಾತ ಪಡಿಸಿದ್ದು , ಸದರಿ ಅಪಘಾತದಲ್ಲಿ ಕಾರಿನಲ್ಲಿ ಕುಳಿತಿದ್ದ ಚಾ.ಸಾ.4 ರವರ ಮಗನ ತಲೆಗೆ ಭಾರಿ ಗಾಯಗಳಾಗಿ ಮರಣ

ಹೊಂದಿದ್ದು ಸಾಕ್ಷೀದಾರರ ಹೇಳಿಕೆಯಿಂದ ಮತ್ತು ತನಿಖೆಯಿಂದ ದೃಢಪಟ್ಟಿದ್ದರಿಂದ ಆರೋಪಿ ವಿರುದ್ಧ ಭಾರತ ದಂಡ ಸಂಹಿತೆ ಕಲಂ ಆರೋಪಿ ನಂ.1 ರವರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 279, 337, 304 ಎ ರನ್ವಯ ಮತ್ತು ಆರೋಪಿ ನಂ.2 ರವರ ವಿರುದ್ಧ ಮೋಟಾರ ವಾಹನ ಕಾಯ್ದೆ ಕಲಂ 146 ಸ.ಕ. 196 ರನ್ವಯ ದೋಷಾರೋಪಣ ಪಟ್ಟಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಕರಣವನ್ನು ದಾಖಲಿಸಿ, ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ಅಪರಾಧದ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರಿಗೆ ಸಮನ್ಸನ್ನು ನೀಡಲಾಯಿತು. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. . ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪಟ್ಟಿಯ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಲಾಯಿತು. ಆರೋಪಿತರ ವಿರುದ್ದ ಆಪದಾದನೆಯನ್ನು ರಚಿಸಿ ಅವರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಲಾಗಿ, ಸದರಿ ಆಪಾದನೆಯನ್ನು ಆರೋಪಿ ನಂ.1 ರವರು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ. ಆರೋಪಿ ನಂ.2 ರವರು ತಪ್ಪನ್ನು ಒಪ್ಪಿಕೊಂಡು ದಂಡವನ್ನು ಕಟ್ಟಿರುತ್ತಾರೆ.

4. ಅಭಿಯೋಜನಾ ಪಕ್ಷದವರು ಆರೋಪಿ ನಂ.1 ರವರ ಮೇಲಿನ ಪ್ರಕರಣವನ್ನು ರುಜುವಾತುಪಡಿಸಲು ಈ ಪ್ರಕರಣದಲ್ಲಿ ಅ.ಸಾ: 1 ರಿಂದ

5 ರವರನ್ನು ವಿಚಾರಣೆಗೊಳಪಡಿಸಿ, ನಿ.ಪಿ. 1 ರಿಂದ 11 ನ್ನು ಗುರುತಿಸಿಕೊಂಡಿರುತ್ತಾರೆ. ಆರೋಪಿ ನಂ.1 ರವರ ವಿರುದ್ದ ಕಂಡು ಬಂದ ಸಾಕ್ಷಿದಾರರ ಹೇಳಿಕೆಗಳನ್ನು ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಪಡೆದುಕೊಳ್ಳಲಾಯಿತು. ಆರೋಪಿ ನಂ.1 ರವರು ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿಸಿರುವುದಿಲ್ಲ.

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಿ, ಮೌಖಿಕ ಸಾಕ್ಷ್ಯ ಮತ್ತು ದಾಖಲೆಗಳನ್ನು ಪರಿಶೀಲಿಸಿ ತೀರ್ಪಿಗಾಗಿ ಕಾಯ್ದಿರಿಸಲಾಯಿತು.

6. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

1. ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯ ವಿಜಯಪುರ-ಕಲಬುರ್ಗಿ ಎನ್.ಎಚ್-50 ರಲ್ಲಿ ಯಂಕಂಚಿ ಬೈಪಾಸ ಹತ್ತಿರ ದಿನಾಂಕ 08.03.2022 ರಂದು 23.20 ಗಂಟೆಯ ಸುಮಾರಿಗೆ ಆರೋಪಿ ನಂ.1 ರವರು ಕಾರ ನಂ.ಎಮ್.ಎಚ್-12/ಇ.ಜಿ-7990 ನೇದ್ದರಲ್ಲಿ ಚಾ.ಸಾ.4 ರವರ ಮಗನನ್ನು ಕೊಡಿಸಿಕೊಂಡು ಅತೀವೇಗವಾಗಿ ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿದ್ದು, ಈ ಮೂಲಕ ಭಾ.ದ.ಸ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶವಾಗಿ ರುಜುವಾತು ಪಡಿಸುತ್ತಾರೆಯೇ?

2. ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನಂ.1 ರವರು ಈ ಮೇಲೆ ಹೇಳಿದ ವಾಹನವನ್ನು ಅತೀವೇಗವಾಗಿ ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿ ಮುಂದೆ

ಹೊರಟಿದ್ದ ಟ್ರ್ಯಾಕ್ಟರ ನಂ.ಕೆ.ಎ.28/ಟಿ.ಡಿ-9696 ನೇದ್ದಕ್ಕೆ ಜೋಡಿಸಿದ್ದ ಕಬ್ಬು ತುಂಬಿದ ಟ್ರೇಲರ ನಂ.ಕೆ.ಎ.28/ಟಿ.ಸಿ-3087, ಕೆ.ಎ.28/ಟಿ.ಸಿ-3088 ನೇದ್ದಕ್ಕೆ ಹಿಂಬದಿಯಿಂದ ಹಾಯಿಸಿ ಅಪಘಾತ ಪಡಿಸಿದ್ದು , ಸದರಿ ಅಪಘಾತದಲ್ಲಿ ಕಾರಿನಲ್ಲಿ ಕುಳಿತಿದ್ದ ಚಾ.ಸಾ.4 ರವರ ಮಗನ ತಲೆಗೆ ಭಾರಿ ಗಾಯಗಳಾಗಿ ಮರಣ ಹೊಂದಿದ್ದು ಈ ಮೂಲಕ ಭಾ.ದ.ಕಲಂ 304 ಎ ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶವಾಗಿ ರುಜುವಾತು ಪಡಿಸುತ್ತಾರೆಯೇ ?

3. ಯಾವ ಆದೇಶ ?

7. ಈ ಮೇಲಿನ ಅಂಶಗಳಿಗೆ ನಾನು ಈ ಕೆಳಗಿನಂತೆ ಉತ್ತರಿಸಿದ್ದೇನೆ.

| | | |
|---|---|---|
| ಅಂಶ ನಂ.1 ಮತ್ತು 2 | : | ನಕಾರಾತ್ಮಕವಾಗಿ. |
| ಅಂಶ ನಂ.3 | : | ಅಂತಿಮ ಆದೇಶದಂತೆ, ಈ ಕೆಳಗಿನ ಕಾರಣಗಳಿಗಾಗಿ........ |

<u>ಕಾರಣಗಳು</u>

**8.** **<u>ಅಂಶ 1 ಮತ್ತು 2</u>** ಃ ಈ ಎರಡು ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿದ್ದು, ಒಂದೇ ರೀತಿಯ ಸಾಕ್ಷ್ಯವನ್ನು ಆಧರಿಸಿ ಚರ್ಚಿಸಿ ನಿರ್ಧರಿಸಬೇಕಾಗಿರುವುದರಿಂದ ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸಲು ಒಂದೇ ಸಮಾನ ಚರ್ಚೆಯಲ್ಲಿ ನಿರ್ಧರಿಸಲು ತೀರ್ಮಾನಿಸಿರುತ್ತೇನೆ.

ಆರೋಪಿ ನಂ.1 ರವರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 279, 337, 304 ಎ ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದಾರೆಂದು

ಆಪಾದಿಸಲಾಗಿದೆ. ತನಿಖಾಧಿಕಾರಿಗಳು ತನಿಖೆಯನ್ನು ನಡೆಸಿ, ಆರೋಪಿ ನಂ.**1** ರವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅಭಿಯೋಗದವರು ಆರೋಪಿಯ ಮೇಲಿನ ಆಪಾದನೆಯನ್ನು ರುಜುವಾತು ಪಡಿಸಲು ನ್ಯಾಯಾಲಯದ ಮುಂದೆ ಅ.ಸಾ. 1 ರಿಂದ 5 ರವರನ್ನು ವಿಚಾರಣೆಗೆ ಒಳಪಡಿಸಿ ನಿ.ಪಿ. 1 ರಿಂದ 11 ನ್ನು ಗುರುತಿಸಿಕೊಂಡಿರುತ್ತಾರೆ.

9. ಅ.ಸಾ.1 ರವರು ಪಿರ್ಯಾದುದಾರರಾಗಿರುತ್ತಾರೆ. ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಫೆಬ್ರುವರಿ 2022 ರಲ್ಲಿ ತಾನು ತನ್ನ ಟ್ರ್ಯಾಕ್ಟರಗೆ ಟ್ರೇಲರಗಳನ್ನು ಜೋಡಿಸಿಕೊಂಡು ಕಬ್ಬನ್ನು ತುಂಬಿಕೊಂಡು ಗುಬ್ಬೆವಾಡದಿಂದ ಮಲಘಾಣ ಕಾರ್ಖಾನೆಗೆ ಹೋಗುತ್ತಿದ್ದಾಗ ಗೋಲಗೇರಿ ಹತ್ತಿರ ಕಾರನವನ್ನು ಹಿಂದಿನಿಂದ ಬಂದು ಕೊನೆಯ ಟ್ರೇಲರಗೆ ಡಿಕ್ಕಿ ಪಡಿಸಿರುತ್ತಾರೆ. ಅಪಘಾತದ ಪರಿಣಾಮವಾಗಿ ತನ್ನ ಟ್ರೇಲರನ 2 ಗಾಲಿಗಳು ಕಿತ್ತುಹೊಗಿದ್ದು , ತಾನು ತನ್ನ ಗಾಡಿಯನ್ನು ಇಳಿದು ನೋಡಲಾಗಿ ಕಾರ ಚಾಲಕನಿಗೆ ಗಾಯಗಳಾಗಿದ್ದವು , ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಇನ್ನೊಬ್ಬರಿಗೆ ಗಾಯಗಳಾಗಿ ಮರಣ ಹೊಂದಿದ್ದರು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಮುಂದುವರೆದು , ಅಲ್ಲಿ ಪಕ್ಕದಲ್ಲಿದ್ದ ಜನರು ಬಂದು ಅವರನ್ನು ಕಾರಿನಿಂದ ಹೊರಗೆ ತೆಗೆದಿರುತ್ತಾರೆ. ಆರೋಪಿ ನಂ.1 ರವರು ಮದ್ಯ ಸೇವನೆ ಮಾಡಿ ಕಾರು ಚಾಲನೆ ಮಾಡಿದ್ದರಿಂದ ಅಪಘಾತವಾಗಿದೆ ಈ ಬಗ್ಗೆ ತಾನು ದೂರನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯವರ ಪರ

ಪಾಟೀ ಸವಾಲಿನಲ್ಲಿ ಅಭಿಯೋಜನೆಯವರು ಸೂಚಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ.ಆರೋಪಿಯ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

> “ ನಾನೇ ಕಾರಿಗೆ ಎಡಭಾಗಕ್ಕೆ ಡಿಕ್ಕಿ ಹೊಡೆದಿದ್ದರಿಂದ ಕಾರ ಜಖಂ ಗೊಂಡಿದೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷ್ಯತದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ”

10. ಅ.ಸಾ.2 ರವರು ಮೃತರ ತಂದೆಯಾಗಿರುತ್ತಾರೆ. ,ಅ.ಸಾ.3 ರವರು ಮೃತರ ಸಹೋದರನಾಗಿರುತ್ತಾರೆ. ಅ.ಸಾ.4 ರವರು ಮೃತರ ಗೆಳಯನಾಗಿರುತ್ತಾರೆ. ಇವರು ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡ ಸಾಕ್ಷೀದಾರರಾಗಿರುತ್ತಾರೆ. ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಮೃತ ರಾಜವರ್ಧನರವರು ದಿನಾಂಕ 08.03.2022 ರಂದು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಕಾರ ಚಾಲಕನಾದ ಆರೋಪಿಯ ತಪ್ಪಿನಿಂದ ಅಪಘಾತವಾಗಿರುತ್ತದೆ. ಅಪಘಾತವು ಯಾರ ನಿರ್ಲಕ್ಷ್ಯತನದಿಂದ ಆಗಿದೆ ಎಂದು ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯವರ ಪರ ಪಾಟೀ ಸವಾಲಿನಲ್ಲಿ ಅಭಿಯೋಜನೆಯವರು ಸೂಚಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆರೋಪಿಯ ಪರ ಪಾಟೀ ಸವಾಲಿನಲ್ಲಿ ಟ್ರ್ಯಾಕ್ಟರ ಚಾಲಕನ ತಪ್ಪಿನಿಂದ ಆಗಿದೆ ಎಂದು ಸೂಚಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ.

11. ಅ.ಸಾ.5 ಶವಪಂಚನಾಮೆ ಮತ್ತು ಗುನ್ಹೆ ಜಾಗೆಯ ಪಂಚನಾಮೆಯ ಸಾಕ್ಷೀದಾರರಾಗಿದ್ದು, ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಶವ

ಪಂಚನಾಮೆಯಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7 ಎ ಎಂದು , ಫೋಟೋವನ್ನು ನಿ.ಪಿ. 8 ಎಂದು ಹಾಗೂ ಗುನ್ಹಾ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.9 ಎ ಎಂದು, ಫೋಟೋವನ್ನು ನಿ.ಪಿ. 10 ಮತ್ತು 11 ಎಂದು ಗುರುತಿಸಲಾಗಿರುತ್ತದೆ. . ನಿ.ಪಿ. 7 ಕ್ಕೆ ಮೃತರ ಶವ ಪಂಚನಾಮೆಯ ಸಮಯದಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ. 9 ಕ್ಕೆ ಗುನ್ಹಾ ಜಾಗದಲ್ಲಿ ಸಹಿ ಮಾಡಿರುತ್ತೇನೆ. ಯಂಕಂಚಿ ಬೈ ಪಾಸ್ ಹತ್ತಿರ ಕಬ್ಬಿನ ಟ್ರ್ಯಾಕ್ಟರ ಮತ್ತು ಒಂದು ಕಾರು ಇತ್ತು. ಯಂಕಂಚಿ ಬೈ ಪಾಸ್ ಹತ್ತಿರ ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿತರ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

> "ಯಂಕಂಚಿ ಬೈ ಪಾಸ್ ಹತ್ತಿರ ನಾನು ಸಹಿ ಮಾಡಿರುವ ದಾಖಲೆಯಲ್ಲಿ ಏನು ಬರೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಅಲ್ಲಿಗೆ ಯಾರು ಕರೆಸಿರುವುದಿಲ್ಲ. ಶಿವಾನಂದ ಲಾಳಸಂಗಿ ಎನ್ನುವವರು ನನಗೆ ಫೋನ್ ಮಾಡಿ ಕರೆಸಿದ್ದರು. ದಿ.09-03-2022 ರಂದು ರಾತ್ರಿ 1-30 ರಿಂದ 2-00 ಗಂಟೆಗೆ ನಾನು ಅಲ್ಲಿಗೆ ಬಂದಿದ್ದೆ. ಟೈಪ್ ಮಾಡಿದ ಹಾಳೆಯಲ್ಲಿ ನನ್ನ ಸಹಿಯನ್ನು ಪಡೆದಿದ್ದರು ಎಲ್ಲಿ ಟೈಪ್ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಟ್ರ್ಯಾಕ್ಟರ ಉತ್ತರ ದಿಕ್ಕಿಗೆ ಮುಖ ಮಾಡಿಕೊಂಡು ನಿಂತಿತ್ತು. ಕಾರು ಪಶ್ಚಿಮ ದಿಕ್ಕಿನಲ್ಲಿ ನಿಂತಿತ್ತು."
>
> "ಟ್ರ್ಯಾಕ್ಟರ ಚಾಲಕನ ನಮ್ಮ ಊರಿನವರು ಎಂದರೆ ಸರಿ. ಟ್ರ್ಯಾಕ್ಟರ ಚಾಲಕನಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. "

ಎಂದು ಸಾಕ್ಷ್ಯ ನುಡಿದಿರುತ್ತಾರೆ.

12. ಅ.ಸಾ.1 ರವರು ಅಪಘಾತದಲ್ಲಿ ಭಾಗಿಯಾದ ಟ್ರ್ಯಾಕ್ಟರನ ಚಾಲಕನಾಗಿರುತ್ತಾರೆ. ಇವರು ತಮ್ಮ ವಿಚಾರಣೆಯಲ್ಲಿ ಕಾರ ಚಾಲಕನಾದ ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅ.ಸಾ.2 ರಿಂದ 4 ರವರು ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡ ಸಾಕ್ಷೀದಾರರಾಗಿರುತ್ತಾರೆ. ಅ.ಸಾ.5 ರವರು ಗುನ್ನೆ ಜಾಗೆಯ ಪಂಚನಾಮೆಯ ಸಾಕ್ಷೀದಾರರಾಗಿರುತ್ತಾರೆ. ಇವರು ಗುನ್ನೆ ಜಾಗೆಯಲ್ಲಿ ಪಂಚನಾಮೆಯನ್ನು ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.ಮುಂದುವರೆದು ಆರೋಪಿಯ ಪರ ಪಾಟೀ ಸವಾಲಿನಲ್ಲಿ ಅದರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇವರ ಈ ಸಾಕ್ಷ್ಯವನ್ನು ಪರಿಶೀಲಿಸಿದಾಗ ಪಂಚನಾಮೆಯಲ್ಲಿ ಬರೆದ ವಿಷಯ ಇವರಿಗೆ ಗೊತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ನಿ.ಪಿ 9 ಗುನ್ನೆ ಪಂಚನಾಮೆಯನ್ನು ನಂಬುವಲ್ಲಿ ಸಂಶಯವುಂಟಾಗುತ್ತದೆ. ಅಪಘಾತದಲ್ಲಿ ಭಾಗಿಯಾಗಿರುವ ಟ್ರ್ಯಾಕ್ಟರ ಚಾಲಕನಾಗಿರುವ ಅ.ಸಾ.1 ರವರು ಸಹಜವಾಗಿ ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳುವ ಸಾಧ್ಯತೆ ಇರುತ್ತದೆ. ಆರೋಪಿಯ ಮೇಲೆ ಆಪಾದಿಸಲಾದಂತೆ ಆರೋಪಿಯ ಅಜಾಗರೂಕತೆ ಮತ್ತು ದುಡುಕಿನ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂದು ನಂಬಲು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಯಾವುದೇ ಸಾಕ್ಷೀದಾರ ಸಾಕ್ಷ್ಯವನ್ನು ಲಭ್ಯವಿರುವುದಿಲ್ಲ. ನಿ.ಪಿ.9 ಪಂಚನಾಮೆಯು ರುಜುವಾತು ಆಗಿರುವುದಿಲ್ಲ. ಅಂತೆಯೇ ಅಭಿಯೋಜನೆಯವರು ಆರೋಪಿಯ ಮೇಲಿನ ಆಪಾದನೆಯನ್ನು ರುಜುವಾತು

ಮಾಡಲು ವಿಫಲರಾಗಿದ್ದಾರೆ ಎಂದು ತೀರ್ಮಾನಿಸಿ ಅಂಶ ನಂ.**1** ಮತ್ತು **2** ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ**.**

13. <u>ಅಂಶ ನಂ.**3** ಃ</u> ಈ ಮೇಲಿನ ಅಂಶ 1 ಮತ್ತು 2 ಕ್ಕೆ ನೀಡಿರುವ ಕಾರಣ ಮತ್ತು ಉತ್ತರಕ್ಕನುಗುಣವಾಗಿ ಈ ಕೆಳಗಿನಂತೆ ಆದೇಶಿಸಿದ್ದೇನೆ.

<u>ಆದೇಶ</u>

ದಂ.ಪ್ರ.ಸಂ. ಕಲಂ 255(1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ನಂ.1 ರವರನ್ನು ಭಾರತ ದಂಡ ಸಂಹಿತೆ ಕಲಂ 279, 304 ಎ ರನ್ವಯ ಶಿಕ್ಷಾರ್ಹವಾದ ಅಪರಾಧದ ಆಪಾದನೆಯಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿ ನಂ.1 ರವರನ್ನು ಈ ಪ್ರಕರಣದಿಂದ ಸ್ವತಂತ್ರ್ಯಗೊಳಿಸಿದ್ದು, ಸದರಿ ಆರೋಪಿಯು ನ್ಯಾಯಾಲಯಕ್ಕೆ ಬರೆದುಕೊಟ್ಟ ವೈಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆಯನ್ನು ಮೇಲ್ಮನವಿ ಅವಧಿ ಮುಗಿಯುವವರೆಗೆ ಮುಂದುವರಿಸಲಾಗಿದೆ.

( ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನುಕೊಟ್ಟು, ಬೆರಳಚ್ಚು ಮಾಡಿದ ನಂತರ ಪರಿಷ್ಕರಿಸಿ, ತಿದ್ದುಪಡಿ ಮಾಡಿ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 01 ನೇ ಜುಲೈ-2026 ರಂದು ಉಚ್ಚರಿಸಲಾಯಿತು )

(ನಾಗೇಶ ಕೆ. ಮೊಗೇರ)
ಪ್ರಧಾನ ಹಿರಿಯಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿಂದಗಿ.

<u>ಅನುಬಂಧ</u>

<u>ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿಗಳು**.**</u>

| | | |
|---|---|---|
| ಅ.ಸಾ.1 | ಃ | ಅಭಿಲಾಷ ಉಡಚಾಣ |
| ಅ.ಸಾ.2 | ಃ | ವಿಠಲ ಮಹಾತ್ಮೆ |
| ಅ.ಸಾ.3 | ಃ | ವೈಷ್ಣವ ಮಹಾತ್ಮೆ |

| | | |
|---|---|---|
| ಅ.ಸಾ.4 | ಃ | ಸಂತೋಷ ಮಾಳಿ |
| ಅ.ಸಾ.5 | ಃ | ಶಿವಶರಣ ಕೊಡಗೂಳಿ |

<u>ಅಭಿಯೋಜನೆ ಪರ ಗುರುತಿಸಿಕೊಂಡಿರುವ ದಾಖಲೆಗಳು</u>

| | | |
|---|---|---|
| ನಿ.ಪಿ.1 | ಃ | ದೂರು |
| ನಿ.ಪಿ.1 ಎ | ಃ | ಸಹಿ |
| ನಿ.ಪಿ.2 | ಃ | ಅ.ಸಾ.2 ರವರ ಹೇಳಿಕೆ |
| ನಿ.ಪಿ.3 | ಃ | ಪಿ.ಎಮ್.ವರದಿ |
| ನಿ.ಪಿ.4 | ಃ | ಎಮ್.ವಿ ವರದಿ |
| ನಿ.ಪಿ.5 | ಃ | ಅ.ಸಾ.3 ರವರ ಹೇಳಿಕೆ |
| ನಿ.ಪಿ.6 | ಃ | ಅ.ಸಾ.4 ರವರ ಹೇಳಿಕೆ |
| ನಿ.ಪಿ.7 | ಃ | ಇಂಕ್ವಿಸ್ಟ್ ಪಂಚನಾಮೆ |
| ನಿ.ಪಿ.7 ಎ | ಃ | ಸಹಿ |
| ನಿ.ಪಿ.8 | ಃ | ಪೋಟೊ |
| ನಿ.ಪಿ.9 | ಃ | ಗುನ್ನೆ ಜಾಗೆಯಪಂಚನಾಮೆ |
| ನಿ.ಪಿ.9 ಎ | ಃ | ಸಹಿ |
| ನಿ.ಪಿ.10 ಮತ್ತು 11 | ಃ | ಪೋಟೊಗಳು |

<u>ಅಭಿಯೋಜನೆ ಪರ ಗುರುತಿಸಿಕೊಂಡಿರುವ ಮುದ್ದೆಮಾಲುಗಳು</u>

-ಇಲ್ಲ-

<u>ಆರೋಪಿಯ ಪರ ವಿಚಾರನೆಯಾದ ಸಾಕ್ಷಿಗಳು ಮತ್ತು ಗುರುತಿಸಿಕೊಂಡಿರುವ ದಾಖಲೆಗಳು.</u>

-ಇಲ್ಲ-

NAGESH KORGA MOGER
judgment
Digitally signed by NAGESH KORGA MOGER
Location: Sr.Civil Judge and JMFC Sindagi
Date: 2026.07.06 17:25:33 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿಂದಗಿ.